ಕಾರ್ಕಳ ಸರಕಾರಿ ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರ ಸಮಸ್ಯೆ

57(285); ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ)

ಅ) ಕಾರ್ಕಳ ಸರ್ಕಾರಿ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯರ ಹಾಗೂ ಇತರೆ ಸಿಬ್ಬಂದಿಗಳ ಹುದ್ದೆ ಎಷ್ಟು? ಹಾಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು? (ಹುದ್ದೆವಾರು ವಿವರ ನೀಡುವುದು)

ಆ) ಆಸ್ಪತ್ರೆಯಲ್ಲಿ ತಜ್ಞ ಪ್ರಸೂತಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಸದರಿ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ದಾಖಲಾದವರು ವೈದ್ಯರು ಸಮಸ್ಯೆಯಿಂದ ಬೇರೆ ಆಸ್ಪತ್ರೆಗೆ ಹೋಗಬೇಕಾದ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರ ಪರಿಹಾರಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಕಾರ್ಕಳ ಸರ್ಕಾರಿ ಆಸ್ಪತ್ರೆಗೆ ಒಂದು ಮುಖ್ಯ ವೈದ್ಯಾಧಿಕಾರಿ, ಒಂದು ಹಿರಿಯ ವೈದ್ಯಾಧಿಕಾರಿ, ಒಂದು ದಂತ ವೈದ್ಯಾಧಿಕಾರಿ ಹಾಗೂ 9 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 6 ತಜ್ಞ ವೈದ್ಯರು ಮತ್ತು ದಂತ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಸದರಿ ಆಸ್ಪತ್ರೆಯಲ್ಲಿ 67 ಇತರೆ ಸಿಬ್ಬಂದಿ ವರ್ಗದವರ ಹುದ್ದೆಗಳು ಮಂಜೂರಾಗಿದ್ದು, 32 ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. (ಹುದ್ದೆವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ)

ಆ) ಬಂದಿರುವುದಿಲ್ಲ.

ಸದರಿ ಆಸ್ಪತ್ರೆಯಲ್ಲಿ ಒಂದು ಸ್ತ್ರೀ ರೋಗ ತಜ್ಞರ ಹುದ್ದೆ ಮಂಜೂರಾಗಿದ್ದು, ಒಬ್ಬರು ಸ್ತ್ರೀ ರೋಗ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ಬಂದಿರುವುದಿಲ್ಲ.

Kind Attention to Q
LQN 28

ಇದ್ದಿಯ ಸಚ್ಚಂದಿ ಮಾಹಿತಿಯ ದಿನಾಂಕ ದಿ: 23-06-2014ರಲ್ಲಿ ಇದ್ದಂತೆ

ಕ್ರಮ ಸಂ.	ಮಂಜೂರಾತಿ ಪಡೆದ ಸಂಖ್ಯೆ	ಕಾರ್ಯನಿರತ ಪಡೆದ ಸಂಖ್ಯೆ	ಸರ್ಕಾರ ನಿಯೋಜಿಸಿರುವ ಸಂಖ್ಯೆ	ಖಾಲಿ ಇರುವ	ಷರಾ
1	ಪ್ರಾಧ್ಯಾ	2	1	1	
2	ಸಹಾಯಕ ಪ್ರಾಧ್ಯಾ	1	1	0	
3	ಪಾಠಕ ಪ್ರಾಧ್ಯಾ	1	1	0	
4	ಪ್ರಾಧ್ಯಾ	1	1	0	
5	ಪ್ರಾಧ್ಯಾ	1	0	1	
6	ಪ್ರಾಧ್ಯಾ	1	1	0	
7	ಪ್ರಾಧ್ಯಾ	1	0	1	
8	ಪ್ರಾಧ್ಯಾ	1	1	0	
9	ಪ್ರಾಧ್ಯಾ	1	0	1	
10	ಪ್ರಾಧ್ಯಾ	1	0	1	
11	ಪ್ರಾಧ್ಯಾ	1	1	0	
12	ಪ್ರಾಧ್ಯಾ	1	0	1	
13	ಪ್ರಾಧ್ಯಾ	1	0	1	
14	ಪ್ರಾಧ್ಯಾ	2	1	1	
15	ಪ್ರಾಧ್ಯಾ	2	1	1	
16	ಪ್ರಾಧ್ಯಾ	18	16	2	(2) ಪ್ರಾಧ್ಯಾ
17	ಪ್ರಾಧ್ಯಾ	2	2	0	
18	ಪ್ರಾಧ್ಯಾ	1	0	1	
19	ಪ್ರಾಧ್ಯಾ	2	0	2	
20	ಪ್ರಾಧ್ಯಾ	1	0	1	
21	ಪ್ರಾಧ್ಯಾ	1	0	1	
22	ಪ್ರಾಧ್ಯಾ	1	0	1	
23	ಪ್ರಾಧ್ಯಾ	1	0	1	
24	ಪ್ರಾಧ್ಯಾ	1	1	0	
25	ಪ್ರಾಧ್ಯಾ	1	1	0	
26	ಪ್ರಾಧ್ಯಾ	1	1	0	
27	ಪ್ರಾಧ್ಯಾ	3	3	0	
28	ಪ್ರಾಧ್ಯಾ	2	2	0	
29	ಪ್ರಾಧ್ಯಾ	4	1	3	
30	ಪ್ರಾಧ್ಯಾ	2	0	2	
31	ಪ್ರಾಧ್ಯಾ	1	0	1	
32	ಪ್ರಾಧ್ಯಾ	4	1	3	
33	ಪ್ರಾಧ್ಯಾ	4	0	4	
34	ಪ್ರಾಧ್ಯಾ	4	1	3	
35	ಪ್ರಾಧ್ಯಾ	2	0	2	
36	ಪ್ರಾಧ್ಯಾ	2	0	2	
37	ಪ್ರಾಧ್ಯಾ	2	0	2	
	ಒಟ್ಟು	79	39	40	

MEDICAL OFFICER
GOVT. GENERAL HOSPITAL
KARKALA

ಶ್ರೀ ವಿ. ಸುನಿಲ್ ಕುಮಾರ್:– ನಮ್ಮ ತಾಲ್ಲೂಕಿನ ಆಸ್ಪತ್ರೆಗಳಲ್ಲಿ ಕೊರತೆಯಿರುವಂಥ ವೈದ್ಯರುಗಳ ಹುದ್ದೆಯನ್ನು ಯಾವಾಗ ಭರ್ತಿ ಮಾಡುತ್ತೀರಿ?

ಅಧ್ಯಕ್ಷರು:– ಸುನಿಲ್‌ಕುಮಾರ್, ಈಗಾಗಲೇ ಇಂಥ ಎರಡು ಪ್ರಶ್ನೆಗಳು ಬಂದಿವೆ. ಈ ಕಾರಣಕ್ಕಾಗಿಯೇ ಆ ಪ್ರಶ್ನೆಯನ್ನು ಮುಂದಕ್ಕೆ ಹಾಕಿ ಒಂದು ದೊಡ್ಡ ಚರ್ಚೆಯನ್ನೇ ಇದರ ಬಗ್ಗೆ ಇಟ್ಟುಕೊಳ್ಳೋಣವೆಂದು ಹೇಳಿದ್ದೇನೆ.

ಶ್ರೀ ವಿ. ಸುನಿಲ್ ಕುಮಾರ್:– ಅದು ಹುದ್ದೆಗೆ ಸಂಬಂಧಪಟ್ಟಂಥಾಯಿತು. ಎರಡನೆಯ ಪ್ರಶ್ನೆಯಲ್ಲಿ ಪ್ರಸೂತಿ ವೈದ್ಯರ ಕೊರತೆ, ಅಲ್ಲಿ ಸ್ತ್ರೀರೋಗ ತಜ್ಞರು ಇಲ್ಲದಿರುವುದರಿಂದ ಇದರಿಂದಾಗಿ ಏನೇನು ಸಮಸ್ಯೆಯಾಗಿದೆಯೆಂದು ಕೇಳಿರುವುದಕ್ಕೆ ಇದು ಯಾವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಈಗಾಗಲೇ ಪತ್ರಿಕೆಗಳಲ್ಲಿ ಈ ಬಗ್ಗೆ ದೊಡ್ಡ ಪ್ರಮಾಣದಲ್ಲಿ ವರದಿಯಾಗಿದೆ. ಇದನ್ನು ಮಾನ್ಯ ಸಚಿವರೆ, ತಮಗೆ ಮಾನ್ಯ ಅಧ್ಯಕ್ಷರ ಮುಖಾಂತರ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು:– ಇದು ಎಲ್ಲಾ ಕಡೆಯಲ್ಲಿಯೂ ಇದೆ.

ಶ್ರೀ ವಿ. ಸುನಿಲ್‌ಕುಮಾರ್:– ಅದಕ್ಕೆ ಏನಾದರೂ ಪರಿಹಾರ ಮಾಡಬೇಕಲ್ಲಾ ಸಾರ್.

ಅಧ್ಯಕ್ಷರು:– ಪ್ರತಿಯೊಬ್ಬರ ತಾಲ್ಲೂಕಿನಲ್ಲಿ ಈ ಸಮಸ್ಯೆಯಿರುವುದರಿಂದ ಈ ವಿಚಾರದ ಚರ್ಚೆಯಲ್ಲಿ ಪ್ರತಿಯೊಬ್ಬರು ಭಾಗವಹಿಸಲು ಅನುಕೂಲವಾಗಲಿ ಎನ್ನುವ ಉದ್ದೇಶದಿಂದಲೇ ಒಂದು ದಿವಸ ವಿಶೇಷವಾಗಿ ಇದರ ಬಗ್ಗೆ ಚರ್ಚೆ ಮಾಡೋಣ. ಸಮಗ್ರವಾಗಿ ಚರ್ಚೆ ಮಾಡಲು ಒಂದು ದಿವಸವನ್ನೇ ಇದಕ್ಕೆ ತೆಗೆದುಕೊಳ್ಳೋಣ. ನಾನು ನಿಮಗೆ ಹೇಳುವುದೇನೆಂದರೆ, ಈ ಡಾಕ್ಟರ್ ವಿಚಾರದಲ್ಲಿ ಈ ಸಚಿವರಿಗೂ ಪತ್ರ ಬರೆದಿದ್ದೇನೆ, ಮುಖ್ಯಮಂತ್ರಿಗಳಿಗೂ ಪತ್ರವನ್ನು ಬರೆದಿದ್ದೇನೆ, ಒಂದಲ್ಲ, ಎರಡು ಪತ್ರಗಳನ್ನು ಬರೆದಿದ್ದೇನೆ. ಇದು ನಿಮಗೆ ಗೊತ್ತೆ?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ,,

ಅಧ್ಯಕ್ಷರು:– ನೋಡ್ರೀ, ಸದನದಲ್ಲಿರುವ ಎರಡೂ ಇಲಾಖೆಯ ಇಬ್ಬರೂ ಸಚಿವರುಗಳು ಸ್ವತಃ ಡಾಕ್ಟರ್‌ಗಳೇ ಆಗಿದ್ದೀರಿ, ಆಸ್ಪತ್ರೆಯ ಡಾಕ್ಟರ್ ವಿಚಾರದಲ್ಲಿ ನೀವು ತತ್‌ಕ್ಷಣ ಕ್ರಮವನ್ನು ಕೈಗೊಳ್ಳದೇ ಹೋದರೆ ನಾನು ಈಗಲೇ ನಿಮಗೆ ಹೇಳುತ್ತೇನೆ ನೋಡಿ.

ಶ್ರೀ ಜಗದೀಶ್ ಶೆಟ್ಟರ್:– ಏನು ಹೇಳಬೇಕೆಂದಿದ್ದೀರೋ ಅದನ್ನು ಈಗಲೇ ಅವರಿಗೆ ಹೇಳಿಬಿಡಿ.

ಅಧ್ಯಕ್ಷರು:– ಜನರಿಗೆ ಮುಖ ತೋರಿಸುವುದಕ್ಕಾಗುವುದಿಲ್ಲ ಗೊತ್ತೆ, ಏನು ಹೇಳುತ್ತೀರಿ ನೀವು.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ನಾವು ಈಗ Compulsory Rural Service Act ಅನ್ನು pass ಮಾಡಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ನಾನು ಅದರ ಬಗ್ಗೆ follow up ಮಾಡುತ್ತಿದ್ದೇನೆ.

ಅಧ್ಯಕ್ಷರು:– ನೀವು ನಿಮ್ಮ ಕಥೆ ಹೇಳಬೇಡಿ. ಯಾವನೋ ಹೇಳಿಕೊಟ್ಟಿದ್ದನ್ನು ಕೇಳಿಕೊಂಡು ಇಲ್ಲಿ ಕಥೆ ಹೇಳುತ್ತಾರೆ. ನಾನು ನಿಮಗೆ ಏನು ಹೇಳಿದ್ದೇನೆ ಹೇಳಿ.

ಶ್ರೀ ವೈ.ಎಸ್.ವಿ. ದತ್ತಾ:– ಆ ಕೌನ್ಸಲಿಂಗ್ ಅನ್ನು ಮಾಡಿದ್ದಾರೆ. ಅದನ್ನು ತೆಗೆದಿಲ್ಲ. ಅದಕ್ಕೆ ಬೇಕಾದ ಕಾನೂನಿನಲ್ಲಿ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ. ನಾವು ಪಾಸ್ ಮಾಡಿಕೊಡುತ್ತೇವೆ.

ಅಧ್ಯಕ್ಷರು:– ದತ್ತಾರವರೆ, ನಾನು ಏನು ಹೇಳಿದ್ದೇನೆ ಗೊತ್ತೆ. ಮೆಡಿಕಲ್ ಕಾಲೇಜಿನಲ್ಲಿ ಡಾಕ್ಟರ್‌ಗೆ ಯಾವ scale ಅನ್ನು ಕೊಡುತ್ತೀರೋ ಅದೇ scale ಅನ್ನು ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಡಾಕ್ಟರ್‌ಗಳಿಗೆ ಕೊಡಿ ಎಂದು ನಾನು ಹೇಳಿದ್ದೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯವೆಂದರೆ, ಈ ಡಾಕ್ಟರ್‌ಗಳ ವರ್ಗಾವಣೆಗೆ ಸಂಬಂಧಪಟ್ಟಂತೆ ಕೌನ್ಸಲಿಂಗ್ ಇದೆಯಲ್ಲಾ, ಅದನ್ನು ಮೊದಲು ತೆಗೆಯಬೇಕು. ಇದೇ ದೊಡ್ಡ ಪಿಡುಗಾಗಿದೆ.

ಅಧ್ಯಕ್ಷರು:– ಹೌದೌದು. ಅದನ್ನು ತೆಗೆಯಿರಿ.

ಶ್ರೀ ವೈ.ಎಸ್.ವಿ. ದತ್ತಾ:– ಅದನ್ನು ಇವರಿಗೆ ತೆಗೆಯುವುದಕ್ಕೆ ಏನು ತೊಂದರೆಯಾಗಿದೆ?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಡಾಕ್ಟರ್‌ಗಳ ಕೊರತೆ ರಾಜ್ಯದ ಉದ್ದಗಲಕ್ಕೂ ಇರುವಂಥದ್ದು , , ,

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಕೌನ್ಸಲಿಂಗ್‌ನ್ನು ತೆಗೆಯುವುದಕ್ಕೆ ನಿಮಗೇನು ತೊಂದರೆ?

ಶ್ರೀ ಯು.ಟಿ. ಖಾದರ್:– ಗಡಿಬಿಡಿ ಮಾಡಬೇಡಿ, ಸ್ವಲ್ಪ ಸಮಾಧಾನವಾಗಿರಿ, ನಾವು ಇಲ್ಲಿ ಬೊಬ್ಬೆ ಹಾಕಿದ ತಕ್ಷಣ ಡಾಕ್ಟರ್ ಬರುವುದಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ:– ಒಂದು ವರ್ಷದಿಂದ ಡಾಕ್ಟರ್‌ಗಳ ಕೊರತೆ ಬಗ್ಗೆ ಬೊಬ್ಬೆ ಹಾಕುತ್ತಿದ್ದೇವೆ. ನೀವು ಏನು ಮಾಡಿದ್ದೀರಿ ಹೇಳಿ.

ಅಧ್ಯಕ್ಷರು:– ದತ್ತಾರವರೆ ಆ ರೀತಿ ಹೇಳುವುದು ಬೇಡ. ಈಗ ಒಂದು ಕೆಲಸ ಮಾಡೋಣ. ಈ ವಿಷಯದ ಬಗ್ಗೆ ಚರ್ಚೆಯನ್ನು ಸೋಮವಾರ, ಮಂಗಳವಾರ ಮಾಡೋಣ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಬಳಸಿರುವ ಪದ ಸರಿಯಿಲ್ಲ. ಬೊಬ್ಬೆ ಹಾಕಿದ ತಕ್ಷಣ ಡಾಕ್ಟರ್ ಬರುತ್ತಾರೆಯೆ ಎಂದಿದ್ದಾರೆ. ಆ ಪದವನ್ನು ಕಡತದಿಂದ ತೆಗೆದು ಹಾಕಬೇಕು.

ಅಧ್ಯಕ್ಷರು:– ಅದನ್ನು ನಾನು ಕೇಳಿಸಿಕೊಳ್ಳಲಿಲ್ಲ. ಅವರು ಹೇಳಿದ್ದು ನನಗೆ ಕೇಳಿಸಲಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಸಚಿವರು ಮಾತನಾಡುವಾಗ ನೀವು ಬೊಬ್ಬೆ ಹಾಕಿದ ತಕ್ಷಣ ಡಾಕ್ಟರ್‌ಗಳು ಬಂದುಬಿಡುತ್ತಾರೆಯೆ ಎಂದಿದ್ದಾರೆ. ಇದು ಬಹಳ ಉದ್ಧಟತನದ ಮಾತು.

(ಗೊಂದಲ)

ಅಧ್ಯಕ್ಷರು:– ನೀವು ಈಗ ಏನು ಹೇಳುತ್ತಿದ್ದೀರೋ ಅದು ನನಗೆ ಕೇಳಿಸುತ್ತಿಲ್ಲ.

ಶ್ರೀ ಅರವಿಂದ ಲಿಂಬಾವಳಿ:– ಬೊಬ್ಬೆ ಹಾಕಿದರೆ ಡಾಕ್ಟರ್‌ಗಳು ಬರುವುದಿಲ್ಲವೆಂದು ಮಾನ್ಯ ಸಚಿವರು ಹೇಳಿದರು. ಅದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು:– ಮಂಜುರವರೆ, ಹಾಸನದಲ್ಲಿ ಡಾಕ್ಟರ್ ಇದ್ದಾರೆಯೆ?

ಶ್ರೀ ಎ. ಮಂಜು:– ಡಾಕ್ಟರ್‌ಗಳು ಇಲ್ಲದೇ ಇರುವುದರಿಂದಲೇ ನಾನು ಮಾತನಾಡುವುದಕ್ಕೆ ಎದ್ದು ನಿಂತಿರುವುದು.

ಅಧ್ಯಕ್ಷರು:– ಈಗ ಕುಳಿತುಕೊಳ್ಳಿ. ಆಮೇಲೆ ಮಾತನಾಡುವಿರಂತೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಡಾಕ್ಟರ್‌ಗಳ ಕೊರತೆ ಇರುವ ಬಗ್ಗೆ ಮಾನ್ಯ ದತ್ತಾರವನ್ನು ಕೇಳಿದರು. ಅವರು ಆ ರೀತಿ ಕೇಳಿದಾಗ ಮಂತ್ರಿಗಳು ಏಕೋ ಕೋಪಿಸಿಕೊಂಡು ಬೊಬ್ಬೆ ಹಾಕಿದರೂ ಡಾಕ್ಟರ್‌ಗಳು ಸಿಕ್ಕುವುದಿಲ್ಲವೆಂದು ಹೇಳಿದರು.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಚಿವರೆ, ಡಾಕ್ಟರ್‌ಗಳಿಲ್ಲದ ಕೆಟ್ಟ ಪರಿಸ್ಥಿತಿ ಇಡೀ ರಾಜ್ಯದಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳು ಅವರ ಭಾಷಣದಲ್ಲಿ ಏನು ಹೇಳಿದ್ದಾರೆ ಹೇಳಿ. ಯೋಗ್ಯವಾದ ಆರೋಗ್ಯವೆಂದು ಹೇಳಿದ್ದಾರೆ ತಾನೆ. ನಾನು ಅವರಿಗೆ ಪತ್ರದಲ್ಲಿ ಬರೆದಿದ್ದೇನೆ. ಆಸ್ಪತ್ರೆಯಲ್ಲಿ ಡಾಕ್ಟರ್‌ಗಳೇ ಇಲ್ಲದೇ ಹೋದರೆ ಯೋಗ್ಯವಾದಂಥ ಆರೋಗ್ಯವನ್ನು ಹೇಗೆ ಕೊಡುತ್ತೀರೆಂದು ನಾನು ಪತ್ರವನ್ನು ಬರೆದಿದ್ದೇನೆ. ದಯವಿಟ್ಟು ನೀವಿಬ್ಬರೂ ಸಚಿವರುಗಳು ಮುಖ್ಯಮಂತ್ರಿಗಳ ಜೊತೆ ಕುಳಿತುಕೊಂಡು ಡಾಕ್ಟರ್‌ಗಳಿಗೆ ಒಂದು ಲಕ್ಷವೋ, ಎರಡು ಲಕ್ಷವೋ ಕೊಟ್ಟು ಜನರಿಗೆ ವೈದ್ಯರುಗಳ ಸೇವೆ ಒದಗಿಸಿ. ಜನರುಗಳೇನು ಡಾಕ್ಟರ್‌ಗಳಿಲ್ಲದೇ ಸಾಯಬೇಕೆನು?

ಶ್ರೀ ಬಿ.ಆರ್. ಪಾಟೀಲ್:– ಸದನ ಮುಗಿಯುವುದರೊಳಗೆ ಡಾಕ್ಟರ್‌ಗಳನ್ನು ತುಂಬುವ ಪ್ರಕ್ರಿಯೆಯನ್ನು ಮುಗಿಸಬೇಕು.

ಶ್ರೀ ಅರವಿಂದ ಲಿಂಬಾವಳಿ:– ಪತ್ರ ಬರೆದರೆ ಡಾಕ್ಟರ್‌ಗಳು ಬರುವುದಿಲ್ಲವೆಂದು ಹೇಳುತ್ತಾರೇನೋ?

ಅಧ್ಯಕ್ಷರು:– ಇದರ ಬಗ್ಗೆ ಚರ್ಚೆ ಮಾಡೋಣ ಬಿಡಿ. ಚರ್ಚೆ ಮಾಡೋಣ, ಏಕೆ ಆಗೋಲ್ಲ ನೋಡೋಣ.

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ಆರೋಗ್ಯ ಸಚಿವರು ಅನಾರೋಗ್ಯ ಪದವನ್ನು ಉಪಯೋಗ ಮಾಡಿದ್ದಾರೆ.

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಖಂಡಿತಾ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಬೊಬ್ಬೆ ಹಾಕಿದರೆ ಎನ್ನುವ ಪದಗಳು unparliament word ಆಗುತ್ತದೆಯೆ?

ಅಧ್ಯಕ್ಷರು:– ಈಗ ಸರ್ಕಾರ ಬಂದು ಒಂದು ವರ್ಷವಾಯಿತು.

ಶ್ರೀ ಆರ್. ಅಶೋಕ್:– ಮಾನ್ಯ ಜಯಚಂದ್ರರವರೇ, ನಾಳೆ ನೀವು ಈ ಕಡೆ ಬರಬಹುದು ಆದರೆ ಆ ಪದ ಉಪಯೋಗ ಮಾಡುವುದು ಸರಿಯಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಅದು unparliamentary ಪದವೇ?

ಶ್ರೀ ವೈ.ಎಸ್.ವಿ. ದತ್ತಾ:– ನಿನ್ನೆ ಮಾತನಾಡಿದ್ದು ಕಡತದಿಂದ ತೆಗೆದು ಹಾಕಿದರು, ಅದು parliamentary ಪದ ಅಲ್ಲ.

(ಗೊಂದಲ)

ಅಧ್ಯಕ್ಷರು:– ಕಾರಜೋಳ, ದತ್ತಾ ಸ್ವಲ್ಪ ಇರಿ. ಈಗ ನಾವು ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲೇ ಬೇಕು. ಇಲ್ಲದಿದ್ದರೆ ನಮಗೆ ಮಾನ ಮರ್ಯಾದೆ ಏನೂ ಬರುವುದಿಲ್ಲ. ಅದಕ್ಕೋಸ್ಕರ ಈಗ ಸದನ ಏನು ತೀರ್ಮಾನ ಮಾಡುತ್ತದೆ, ಅವರು ಒಪ್ಪಿಕೊಳ್ಳಬೆಕು. ಇಬ್ಬರೂ ಸಚಿವರು ಇಲ್ಲಿಯೇ ಇದ್ದೀರಿ. ದಯವಿಟ್ಟು ಈ ಸದನದ ಮನಸ್ಸನ್ನು ಅರ್ಥ ಮಾಡಿಕೊಂಡು ಬೇಗ ವೈದ್ಯರನ್ನು ತುಂಬುವಂತಹ ಕೆಲಸವನ್ನು ಮಾಡಿ. ಅದಕ್ಕೆ ನಾನು ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಮೆಡಿಕಲ್ ಕಾಲೇಜಿನಲ್ಲಿ ಇರುವಂತಹ ಡಾಕ್ಟರಿಗೆ ಮತ್ತು ಇಲಾಖೆಯಲ್ಲಿರುವಂತಹ ಡಾಕ್ಟರಿಗೆ ಒಂದೇ pay scale ಮಾಡಿ ಎಂದು ಹೇಳಿದ್ದೇನೆ. ನಿಮಗೆ ಇದನ್ನು ಮಾಡುವುದಕ್ಕೆ ಏನು ತೊಂದರೆ?

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:– 500 ಬೆಡ್ ಹಾಸಿಗೆ ಇರುತ್ತದೆ, ಇಬ್ಬರು ವೈದ್ಯರು ಇರುತ್ತಾರೆ.

ಶ್ರೀ ವೈ.ಎಸ್.ವಿ. ದತ್ತಾ:– ಮೊದಲು ಕೌನ್ಸಲಿಂಗ್ ರದ್ದು ಮಾಡಿ.

(ಗೊಂದಲ)

ಅಧ್ಯಕ್ಷರು:– ವೈದ್ಯರು ಈ ಕಾರಣಕ್ಕಾಗಿ ಬರುವುದಿಲ್ಲ. ಒಂದೇ ಸ್ಕೇಲ್ ಮಾಡಲಿ, ಡಾಕ್ಟರ್ ಬರುತ್ತಾರಾ ಇಲ್ಲವೇ ಎಂದು ನೋಡೋಣ. ಮಾನ್ಯ ಮಂತ್ರಿಗಳು ಏನೋ ಹೇಳುತ್ತಾರಂತೆ ಹೇಳಲಿ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ನಾವು ಅಪ್ರೂವ್ ಮಾಡುತ್ತೇವೆ.

ಶ್ರೀ ಯು.ಟಿ. ಖಾದರ್:– ಮಾನ್ಯ ಅಧ್ಯಕ್ಷರೆ, ರಾಜ್ಯದ ಉದ್ದಗಲಕ್ಕೂ ತಜ್ಞವೈದ್ಯರ ಕೊರತೆ ಇರುವುದು ನಮ್ಮ ಗಮನಕ್ಕೆ ಬಂದಿದೆ. ಮಾನ್ಯ ಸುನಿಲ್ ಕುಮಾರ್‌ರವರು ಕೇಳಿದ ವಿಚಾರದಲ್ಲಿ ಕಾರ್ಕಳಕ್ಕೆ ಸಂಬಂಧಿಪಟ್ಟಂತೆ ಹೇಳುವುದಾದರೆ ಅಲ್ಲಿ 9 ತಜ್ಞ ವೈದ್ಯರ ಹುದ್ದೆಗಳಲ್ಲಿ 6 ತಜ್ಞ ವೈದ್ಯರು ಕೆಲಸ ನಿರ್ವಹಿಸುತ್ತಿದ್ದಾರೆ. ಅಲ್ಲಿ ಒಂದು ಸ್ತ್ರೀ ರೋಗ ತಜ್ಞರ ಹುದ್ದೆ ಮಂಜೂರಾಗಿದ್ದು, ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಲ್ಲಿ ಒಂದು ತಿಂಗಳಿಗೆ 90 ರಿಂದ 95 delivery cases ಆಗುತ್ತಿದೆ. ಮಾನ್ಯ ಸದಸ್ಯರು ಅಲ್ಲಿ ಬಹಳಷ್ಟು ಒತ್ತಡವಿರುವ ಕಾರಣ ಇನ್ನೊಬ್ಬರು ಸ್ತ್ರೀ ರೋಗ ತಜ್ಞರ ಅವಶ್ಯಕತೆ ಇದೆಯೆಂದು ಹೇಳುತ್ತಿದ್ದಾರೆ. ಆದರೆ ನಮ್ಮ ನಿಯಮದ ಪ್ರಕಾರ ಯಾವ ಒಂದು ಆಸ್ಪತ್ರೆಯಲ್ಲಿ ತಿಂಗಳಿಗೆ ನೂರು ಹೆರಿಗೆಗಿಂತಲೂ ಜಾಸ್ತಿಯಾಗುತ್ತದೆ, ಅಲ್ಲಿ contract basis ಮೇಲೆ ಡಾಕ್ಟರನ್ನು ಕೊಡುವುದಕ್ಕೆ ಅವಕಾಶವಿದೆ. ನಿಮಗೆ ಯಾವಾಗ ತಜ್ಞವೈದ್ಯರ ಕೊರತೆಯಾಗುತ್ತದೆ, ಅದಕ್ಕೆ ಪ್ರೈವೇಟ್ ಡಾಕ್ಟರ್ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುವುದಕ್ಕೆ ವಾರಕ್ಕೆ ಎರಡು ದಿವಸ ಬಂದರೆ ಹಾನರರಿ, ಗೈನಾಕಾಲಜಿಸ್ಟ್ ಬಂದು ಒಂದು ಸಿಜೇರಿಯನ್ ಮಾಡಿದರೆ ಒಂದೂವರೆ ಸಾವಿರ ರೂಪಾಯಿ, ಅನಸ್ತೇಶಿಯಾದವರಿಗೆ ಒಂದು ಸಾವಿರ ರೂಪಾಯಿ, ಪಿಡಿಯಾಟ್ರಿಷಿಯನ್‌ಗೆ 500 ರೂಪಾಯಿ, ವಿಸಿಟಿಂಗ್‌ಗೆ ಬಂದರೆ ನೂರು ರೂಪಾಯಿ ಎಂದು ಮಾಡಿದ್ದೇವೆ. ಪ್ರತಿ ಎರಡು ತಿಂಗಳಿಗೊಮ್ಮೆ ಮೀಟಿಂಗ್ ಮಾಡಬೇಕೆಂದು ನಿಯಮ ಇದೆ. ಈ ಮೀಟಿಂಗ್ ಮಾಡಿದಂತಹ ಸಂದರ್ಭದಲ್ಲಿ ನೂರಕ್ಕಿಂತ ಜಾಸ್ತಿ ಡೆಲಿವರಿಯಾದರೆ, ಅದು ನಿಮ್ಮ ಗಮನಕ್ಕೆ ಬಂದರೆ ತಾಲ್ಲೂಕು ಮಟ್ಟದಲ್ಲಿ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಪ್ರೈವೇಟ್ ಡಾಕ್ಟರ್

ಯಾರಾದರೂ ಬರುವುದಿದ್ದರೆ ತೆಗೆದುಕೊಳ್ಳುವುದಕ್ಕೆ ನಿಮಗೆ ಖಂಡಿತ ಅವಕಾಶ ಇದೆ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಇವರು ಕೊಡುತ್ತಿರುವಂತಹ ಹಣ ಬಹಳ ಕಡಿಮೆಯಾಯಿತು. ಪ್ರೈವೇಟ್‌ನಲ್ಲಿ ಲಕ್ಷ ರೂಪಾಯಿ ಕೊಡುವವರಿದ್ದಾರೆ. ಇವರು ಸಂಬಳ ಜಾಸ್ತಿ ಮಾಡಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಒಂದು ಅಪರೇಷನ್ ಮಾಡಿದರೆ 25 ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ. ಅವರು ನಿಮ್ಮ ಹತ್ತಿರ honorariumಗೆ ಬರುತ್ತಾರಾ? ಏನು ಮಾತನಾಡುತ್ತೀರಿ?

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಮೂಲಭೂತ ಸಮಸ್ಯೆ ಏನು ಎಂದು ಗೊತ್ತೇ? ನೋಡಿ ಇವರಿಗೆ ಇನ್ನೂ ಚಿಕ್ಕ ವಯಸ್ಸು. ನಮಗೆ ಇವರ್ಯಾರ ಮೇಲೂ ದ್ವೇಷ ಅಸೂಯೆ ಏನೂ ಇಲ್ಲ. ಇವರೆಲ್ಲ ಅಧಿಕಾರ ಬಂದರೆ ಏನಾಗುತ್ತಾರೆ? ಇವರು constituency ಮಂತ್ರಿಗಳಾಗಿ ಬಿಡುತ್ತಾರೆ. ಈಗ ಎಲ್ಲಾ ಹೇಳಿಕೆ ಕೊಟ್ಟರಲ್ಲ, ನಮಗೆ ಗೊತ್ತೇ ಇಲ್ಲ. ಆಸ್ಪತ್ರೆಗೆ ಹೋಗುವುದು surprise check ಮಾಡುವುದು, ಆಸ್ಪತ್ರೆಗೆ ನುಗ್ಗುವುದು, ಡಾಕ್ಟರ್ ತಪ್ಪು ಮಾಡುತ್ತಿದ್ದರೆ ಹಿಡಿದುಕೊಳ್ಳುವುದು, ಅಲ್ಲಲ್ಲಿ ಪ್ರೆಸ್ ಮೀಟ್ ಮಾಡುವುದು, ಸರ್ಕಾರದ ನೀತಿ ಏನಿದೆ ಎಂದು ಹೇಳುವಂತಹ ಕೆಲಸ ಮಾಡಿದ್ದೀರಾ? ಬೆಳಗ್ಗೆ ಕೃಷಿ ಮಂತ್ರಿಗಳು ನಾನು ಶಿಕಾರಿಪುರಕ್ಕೆ ಮತ್ತು ಬೇರೆ ಕಡೆಗಳಲ್ಲಿ ಹೋಗಿದ್ದೆನು ಎಂದು ಹೇಳಿದರು. ನೀವು ಹೋಗುತ್ತಿದ್ದರೆ, ಓಡಾಡುತ್ತಿದ್ದರೆ ಗೊತ್ತಾಗುತ್ತದೆ. ನಿಮಗೆ ಓಡಾಡುವುದಕ್ಕೆ ಕಾರು ಕೊಟ್ಟಿದ್ದಾರೆ, ಓಡಾಡುವಾಗ ತೊಂದರೆಯಾಗದಿರಲಿ ಎಂದು ಕಾಪಾಡುವುದಕ್ಕೆ ಗನ್ ಮ್ಯಾನ್ ಕೊಟ್ಟಿದ್ದಾರೆ. ಓಡಾಡಿ ಬಂದರೆ ಟಿಎ ಕೊಡುತ್ತಾರೆ. ನೀವು ಹೋದ ಕಡೆಯಲ್ಲೆಲ್ಲಾ ಐ.ಬಿ ಯಲ್ಲಿ ಜಾಗ ಕೊಡುತ್ತಾರೆ. ನಿಮಗೆ ಬೇಕಾದಂತಹ ಊಟ ತಿಂಡಿ ಕೊಡುತ್ತಾರೆ. ನಿಮಗೆ ಕಷ್ಟ ಏನು? ನಾನು ನಿಮಗೆ ನೇರವಾಗಿ ಪ್ರಶ್ನೆ ಕೇಳುತ್ತೇನೆ. ಡಾಕ್ಟರ್ ಬೇಡ, ನರ್ಸ್ ಬೇಡ. ನೀವು ಮಂತ್ರಿಯಾಗಿ ಈ ರಾಜ್ಯದಲ್ಲಿ ಒಂದು ವರ್ಷದಲ್ಲಿ ಎಷ್ಟು ಕಡೆ surprise

inspection ಮಾಡಿದ್ದೀರಿ? ಎಷ್ಟು ಆಸ್ಪತ್ರೆಗಳಿಗೆ ಹೋಗಿದ್ದೀರಿ? ಬಹಳ ವಯಸ್ಸಾದವರು ಎಂದರೆ ಸರಿ. ಮಾನ್ಯ ಕೆ.ಹೆಚ್. ಪಾಟೀಲರು ಆಹಾರ ಮಂತ್ರಿಯಾಗಿ ರಾಜ್ಯದಲ್ಲಿ ಆಹಾರಕ್ಕೆ ತೊಂದರೆಯಾಯಿತು, food shortage ಎಂದರೆ as minister he raided the rice mills. He created panic. ಮಾನ್ಯ ಬಸವಲಿಂಗಪ್ಪನವರು, ಏನ್ರಿ, ಯಾವ ರೀತಿ ಸರ್ಕಾರ ಎಂದರೆ ಅಧಿಕಾರಿಗಳಲ್ಲಿ ನಡುಕ ಹುಟ್ಟಿಸುತ್ತಿದ್ದರು. ಅವರು ಸಾರ್ವಜನಿಕರಲ್ಲಿ ವಿಶ್ವಾಸ ಹುಟ್ಟಿಸುತ್ತಿದ್ದರು. ನೀವೆಲ್ಲ ಇದ್ದೀರಿ ಎಂದು ಗೊತ್ತೇ ಆಗುವುದಿಲ್ಲವಲ್ಲಪ್ಪ. ಈಗ ನೀವು 500 ರೂಪಾಯಿ, 300 ರೂಪಾಯಿ ಕೊಡುತ್ತೇವೆಂದು ಹೇಳಿದಿರಿ. ಹೋಟೆಲ್‌ಗಳಲ್ಲಿ ಚಾಪ್ಸ್‌ಗೆ ಇಷ್ಟು, ಕಬಾಬ್‌ಗೆ ಇಷ್ಟು, ಲಿವರ್‌ಗೆ ಇಷ್ಟು, ಫ್ರೈಗೆ ಎಷ್ಟು ಎಂದು ಹೇಳುತ್ತಾರಲ್ಲ. What is this? Is this the way to run the Government? ನೋಡಿ ಇಲ್ಲಿ ಯಾರೂ ಪಂಡಿತರಿಲ್ಲ, ಯಾರೂ ಸರ್ವಜ್ಞರಿಲ್ಲ.

ಅಧ್ಯಕ್ಷರು:– ನಿಮಗೆ ಯಾರು ಬ್ರೀಫ್ ಮಾಡುತ್ತಾರೆಂದು ಗೊತ್ತಿದೆ. ನೀವು ಪ್ರೈವೇಟ್ ಡಾಕ್ಟರ್ ಬಿಟ್ಟು ಎಷ್ಟೇ ದುಡ್ಡಾಗಲಿ ನಮ್ಮ ಸರ್ಕಾರ ಕಟ್ಟಿಸಿರುವ ಆಸ್ಪತ್ರೆಗಳಿಗೆ ಡಾಕ್ಟರ್ ಕೊಡಿ. ನೀವು ಮೆಡಿಕಲ್ ಕಾಲೇಜು ಯಾರ ಉದ್ಧಾರಕ್ಕಾಗಿ ಮಾಡುತ್ತಿದ್ದೀರಿ?

ಶ್ರೀ ಜಿ.ಹೆಚ್. ಶ್ರೀನಿವಾಸ:– ಮಾನ್ಯ ಅಧ್ಯಕ್ಷರೆ, ಒಬ್ಬ ಪೇಯಿಂಟರ್‌ಗೆ, ಒಬ್ಬ ಗಾರೆಯವನಿಗೆ ಸಾವಿರ ರೂಪಾಯಿ ಕೂಲಿ ಕೊಡುತ್ತಿದ್ದಾರೆ. ಆದರೆ ಡಾಕ್ಟರಿಗೆ ಒಂದೂವರೆ ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳುವುದು ಬಹಳ ಅನ್ಯಾಯ. ಸರ್ಕಾರಿ ಆಸ್ಪತ್ರೆಗಳಿಗೆ ಡಾಕ್ಟರುಗಳು ಯಾರೂ ಬರುವುದಿಲ್ಲ. ಅದರ ಜೊತೆಗೆ ಅವರು post mortem ಮಾಡಬೇಕು.

(ಗೊಂದಲ)

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:– ಸರ್ಕಾರಿ ಡಾಕ್ಟರುಗಳೇ ದುಡ್ಡು ಕೊಡಲಿಲ್ಲವೆಂದರೆ ಡೆಲವರಿ ಮಾಡುವುದಿಲ್ಲ, ಡಿಸ್‌ಚಾರ್ಜ್ ಮಾಡುವುದಿಲ್ಲ. 1500 ರೂಪಾಯಿ ಅದು ಯಾವ ಲೆಕ್ಕಕ್ಕೆ?

(ಗೊಂದಲ)

ಶ್ರೀ ಡಿ.ಎನ್ ಜೀವರಾಜ್:– ಮಾನ್ಯ ಅಧ್ಯಕ್ಷರೆ, ಅವರು ಬೇರೆ ಯಾವುದಕ್ಕೂ ಡಾಕ್ಟರ್ ಕೊಡದಿದ್ದರೂ ಪರವಾಗಿಲ್ಲ. ಬಾಳೆಹೊನ್ನೂರಿನಲ್ಲಿ ಆಸ್ಪತ್ರೆಯಿಂದ ಫೋನ್ ಮಾಡುತ್ತಾರೆ, ಅವರ ಗಮನಕ್ಕೆ ಬಂದಿದೆಯೋ ಇಲ್ಲವೋ? ಒಂದು suicide death ಆಗಿದೆ, ನಮಗೆ post mortem ಮಾಡಿಸಿಕೊಡಿ ಎಂದು ಜನ ನಮಗೆ ಫೋನ್ ಮಾಡುತ್ತಾರೆ. ನಾವು ಡಿಹೆಚ್ಒಗೆ ಫೋನ್ ಮಾಡಿ ಚಿಕ್ಕಮಗಳೂರಿನಿಂದ ಡಾಕ್ಟರನ್ನು ಕರೆದು ಪಿಎಂ ಮಾಡಿಸುವುದು. ಇದು ನಮ್ಮ ಮಂತ್ರಿಗಳಿಗೆ ಗಮನದಲ್ಲಿರಲಿ. ಕಡೇ ಪಕ್ಷ ಪೋಸ್ಟ್ ಮಾರ್ಟಂ ಮಾಡುವುದಕ್ಕೆ ಡಾಕ್ಟರ್ ಇಲ್ಲ. ನೀವು ಬದುಕಿಸುವುದಕ್ಕೆ ಇಲ್ಲದಿದ್ದರೂ, ಸತ್ತಿದ್ದರೂ ನೋಡುವುದಕ್ಕೆ ಡಾಕ್ಟರ್ ಇಲ್ಲ.

ಶ್ರೀ ಸುನಿಲ್ ಕುಮಾರ್ ವಿ.:– ಆಸ್ಪತ್ರೆಗೆ ಬಂದಿರುವಂತಹ ರೋಗಿಗಳನ್ನು ಬೇರೆ ಕಡೆಗೆ ಹೋಗಿ ಎಂದು ನಮ್ಮ ತಾಲ್ಲೂಕಿನಲ್ಲಿ ಹೇಳುತ್ತಿದ್ದಾರೆ. ನಾನು ಅದನ್ನು ಕೇಳುತ್ತಿರುವುದು.

ಅಧ್ಯಕ್ಷರು:– ಆಯಿತು, ಶ್ರೀನಿವಾಸ್ ಕುಳಿತುಕೊಳ್ಳಿ.

ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್:– ಒಬ್ಬ ಕಾಲೇಜು ಶಿಕ್ಷಕನಿಗೆ 30 ಸಾವಿರ ರೂಪಾಯಿ ಕೊಡುತ್ತೇವೆ. ಯುಜಿಸಿ ಸ್ಕೇಲ್ ಇರುವಂತಹ ಒಬ್ಬ ಕಾಲೇಜು ಪ್ರೊಫೆಸರಿಗೆ ಎರಡು ಗಂಟೆ ಕಲಿಸುವುದಕ್ಕೆ ಒಂದು ಲಕ್ಷ ಇಪ್ಪತ್ತು ಸಾವಿರ ಕೊಡುತ್ತೇವೆ. ಡಾಕ್ಟರಿಗೆ 25–30 ಸಾವಿರ ರೂಪಾಯಿ ಸಂಬಳ ಕೊಟ್ಟರೆ ಯಾರೂ ತಾನೇ ಬರುತ್ತಾರೆ?

ಶ್ರೀ ಯು.ಟಿ. ಖಾದರ್:– ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಎಂಬಿಬಿಎಸ್ ಡಾಕ್ಟರಿಗೆ 46 ಸಾವಿರ ರೂಪಾಯಿ ನಮ್ಮ ಇಲಾಖೆಯಿಂದ ಹೋಗುತ್ತಿದೆ. ಪಿ.ಜಿ. ಡಾಕ್ಟರುಗಳಿಗೆ 60 ರಿಂದ 65 ಸಾವಿರ ರೂಪಾಯಿ ಕೊಡುತ್ತಿದ್ದೇವೆ. ಹೈದರಾಬಾದ್–ಕರ್ನಾಟಕದಲ್ಲಿ ಎಲ್ಲಿ ಸಿ ಕೆಟಗರಿ ಜಿಲ್ಲೆ ಇದೆ, ಅಲ್ಲಿ ಒಂದು ಲಕ್ಷ ಅಲ್ಲ, ಇನ್ನು ಹೆಚ್ಚಿಗೆ 25 ಸಾವಿರ ಕೊಡುವುದಕ್ಕೆ ತಯಾರಾಗಿದ್ದೇವೆ. ಆದರೂ ಕೂಡ ತಜ್ಞ ವೈದ್ಯರ ಕೊರತೆ ನಮ್ಮ ಗಮನಕ್ಕೆ ಬಂದಿದ್ದು, ಬೇರೆ ಬೇರೆ ರೀತಿಯಲ್ಲಿ ಆಲೋಚನೆ ಮಾಡಿದಾಗ ನಾವು ನಮ್ಮ

ಎಂಬಿಬಿಎಸ್ ಡಾಕ್ಟರ್‌ರ ವೇತನ 60–65 ರವರೆಗೆ ಜಾಸ್ತಿ ಮಾಡುವ ವಿಚಾರದಲ್ಲಿ ಇನ್ನೂ ಸ್ಪಷ್ಟವಾಗಿಲ್ಲ. ಇದನ್ನು ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ತೆಗೆದುಕೊಂಡ ನಂತರ 1,800 ತಜ್ಞ ವೈದ್ಯರ ಕೊರತೆಯಿದ್ದು, ಮುಂದಿನ ಮೂರು ತಿಂಗಳೊಳಗೆ ಮೂರು ಹಂತದಲ್ಲಿ ಅವರನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಕೈಗೊಂಡಿದ್ದೇವೆ. ಮುಂದಿನ ಒಂದೆರಡು ವರ್ಷಗಳಲ್ಲಿ ತಜ್ಞ ವೈದ್ಯರ ಕೊರತೆಗಳನ್ನು ಬಗೆಹರಿಸುತ್ತೇವೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಅದರ ಜೊತೆಯಲ್ಲಿ ಇವತ್ತು 40 ಮೆಡಿಕಲ್ ಕಾಲೇಜು ಇದ್ದರೂ ಕೂಡ ರೂರಲ್ ಸರ್ವಿಸ್‌ಗೆ ವಿದ್ಯಾರ್ಥಿಗಳು ಬರಬೇಕೆನ್ನುವ ಮನೋಭಾವ ಬಹಳಷ್ಟು ಕಡಿಮೆ ಇದೆ. ಹಾಗಾಗಿ compulsory ಆಗಿ Rural Service Act ಅನ್ನು Assemblyಯಲ್ಲಿ pass ಮಾಡಿಕೊಂಡು ರಾಷ್ಟ್ರಪತಿಯವರಿಂದ ಅಂಕಿತವಾಗಬೇಕೆಂದು ದೆಹಲಿಗೆ ಕಳುಹಿಸಿದ್ದು, ಅದು query ಬಂದು ಮತ್ತೆ ವಾಪಸ್ಸು ದೆಹಲಿಗೆ ಹೋಗಿದೆ. ಅದನ್ನು follow up ಮಾಡಿ ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು:– ಮೆಡಿಕಲ್ ಕಾಲೇಜ್‌ನಲ್ಲಿ ಇರುವ ಡಾಕ್ಟರಿಗೆ work load ಜಾಸ್ತಿ ಇರುತ್ತದಾ, Department ನಲ್ಲಿ ಕೆಲಸ ಮಾಡುವ ಡಾಕ್ಟರಿಗೆ ಕೆಲಸ ಜಾಸ್ತಿಯೇ?

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮೆಡಿಕಲ್ ಕಾಲೇಜಿನಲ್ಲಿ teaching ಇರುತ್ತದೆ. ಅಲ್ಲಿ district hospital ಇರುವುದರಿಂದ patient inflow ಕೂಡ ಜಾಸ್ತಿ ಇದೆ.

ಅಧ್ಯಕ್ಷರು:– ನೀವು ಡಾಕ್ಟರ್ ಆಗಿ ಮತ್ತೆ ನನ್ನ ಹತ್ತಿರ ಈ ರೀತಿ ಮಾತನಾಡಬೇಡಿ. ಮೆಡಿಕಲ್ ಕಾಲೇಜಿನಲ್ಲಿ ಕೆಲಸ ಮಾಡುವಂತಹ ವೈದ್ಯರ work load ಎಷ್ಟು? ಇಲಾಖೆಯಲ್ಲಿ ಕೆಲಸ ಮಾಡುವಂತಹ ವೈದ್ಯರ work load ಎಷ್ಟು? ಅದು PHC ಇರಬಹುದು, ತಾಲ್ಲೂಕು ಆಸ್ಪತ್ರೆ ಇರಬಹುದು, ಯಾವುದೇ ಆಸ್ಪತ್ರೆ ಇರಬಹುದು? Medical Collegeಗಳಲ್ಲಿರುವ

ವೈದ್ಯರುಗಳಿಗೆ private practice ಮಾಡುವಂಥ ಅವಕಾಶವಿಲ್ಲ. ಅವರು teaching ಮಾಡಬೇಕು, ಮತ್ತೆ patient ಅನ್ನು ನೋಡಬೇಕು.

ಅಧ್ಯಕ್ಷರು:– ಆ ರೀತಿ ನಿಮಗೆ ಯಾರು ಹೇಳಿದ್ದು?

ಶ್ರೀ ಯು.ಟಿ. ಖಾದರ್:– ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯಲ್ಲಿ ಅವರ ಟೈಮ್‌ನಲ್ಲಿ ಸರ್ಕಾರಿ ಕೆಲಸ ಮಾಡಬೇಕು, ಅದಾದನಂತರ ಅವರು private practice ಮಾಡುವ ಅವಕಾಶವಿದೆ. ಅದಕ್ಕಾಗಿಯೇ ಅವರಿಗಿಂತ ಸ್ವಲ್ಪ ಜಾಸ್ತಿ ಸಂಬಳ ಇದೆ.

ಅಧ್ಯಕ್ಷರು:– ಅದಕ್ಕೋಸ್ಕರ ಅವರಿಗೆ ಜಾಸ್ತಿ ಸಂಬಳ ಅಲ್ಲವೇ?

(ಗೊಂದಲ)

ಡಾ॥ ಶರಣ ಪ್ರಕಾಶ ಪಾಟೀಲ್:– ಮಾನ್ಯ ಅಧ್ಯಕ್ಷರೆ, MCI Guidelines ಪ್ರಕಾರ. . . AICTE scale ಕೊಟ್ಟಿಲ್ಲ.

ಅಧ್ಯಕ್ಷರು:– ಡಾಕ್ಟರ್ ಎಂದು ಆದಮೇಲೆ ಅವರಿಗೆ ಒಂದು scale, ಇವರಿಗೊಂದು scale ಎಂದು ಏಕೆ ಮಾಡಿದ್ದೀರಿ?

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್:– AICTE ಅದಕ್ಕೆ ನಮ್ಮ Health Minister move ಮಾಡಿದ್ದಾರೆ.

ಅಧ್ಯಕ್ಷರು:– ನೀವು ಮಾಡಿಲ್ಲ, ಬೇಗ ಮಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಸದನದ ಭಾವನೆಗಳೇನು ಎಂದು ಅರ್ಥವಾಗಿದೆ, ದಯಮಾಡಿ ಮುಂದಿನ ಪ್ರಶ್ನೆಗೆ ಹೋಗೋಣ.

ಅಧ್ಯಕ್ಷರು:– Next ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಈಗ Nursing Homeಗಳಿಗೆ permission ಕೊಡುವುದನ್ನು ನಿಲ್ಲಿಸಿ, ಆಗ ಡಾಕ್ಟರ್‌ಗಳು ಸಿಗುತ್ತಾರೆ. ತಾವು

ಡಾಕ್ಟರ್‌ಗಳಿಗೆ 5 ಗಂಟೆ ಆದಮೇಲೆ ಹೋಗಿ duty ಮಾಡಬಹುದೆಂದು ಹೇಳುತ್ತೀರಲ್ಲಾ, ಅಲ್ಲೇ ತಪ್ಪು ಇರುವುದು. ಅವರ scale ಜಾಸ್ತಿ ಮಾಡಿ, duty ಮಾಡಲು ಹೇಳಿ.

ಅಧ್ಯಕ್ಷರು:– ಇವರಿಗೆ ಮಂತ್ರ ಹಾಕುತ್ತಾರೆ, ಅದನ್ನು ಬಂದು ಇಲ್ಲಿ ಹೇಳುತ್ತಾರೆ, ಅಷ್ಟೆ. ಸುಮ್ಮನಿರಿ. ನನಗೆ ತಲೆ ಕೆಟ್ಟು ಹೋಗಿದೆ, ಇಲ್ಲಿಗೆ ನಾವು ಆರಿಸಿ ಬಂದಿರುವುದು ಏತಕ್ಕೆ? ಇಷ್ಟೆ ಅಲ್ಲ, ಈಗ ಏನಾಗಿದೆ ಗೊತ್ತೆ, ನಾನು ಮಂಗಳೂರಿಗೆ ಹೋಗಿ ಬರುತ್ತೇನೆ, ಉಡುಪಿಗೂ ಹೋಗಿ ಬರುತ್ತೇನೆ. ಅದರ ಹಣೆಬರಹ ಏನಾಗಿದೆಯೆಂಬುದು ನನಗೆ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ವಿ. ಸುನಿಲ್ ಕುಮಾರ್:– ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ, ನಮ್ಮ ತಾಲ್ಲೂಕಿನಲ್ಲೂ ಸಮಸ್ಯೆ ಇದೆ.

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಅಧ್ಯಕ್ಷರೆ, ನಮ್ಮ ಕಡೂರಿನಲ್ಲಿ ತಾಲ್ಲೂಕು ಆಸ್ಪತ್ರೆಗೆ ಜನರು ಹೋದರೆ ಅಲ್ಲಿ ಡಾಕ್ಟರ್ ಇಲ್ಲ, ಯಾವ ಸೀಮೆ ಎಂ.ಎಲ್.ಎ. ಎಂದು ಬೈದುಕೊಂಡು ಹೋಗುತ್ತಾರೆ.

ಅಧ್ಯಕ್ಷರು:– ಅಯಿತು, ಚರ್ಚೆ ಮಾಡುವುದು ಬೇಡ. ಮಾನ್ಯ ಮುಖ್ಯಮಂತ್ರಿಯವರು ಬರಲಿ, ಅವರ ಎದುರಿಗೆ ಚರ್ಚೆ ಮಾಡೋಣ.

ಪ್ರಶ್ನೆ ಸಂಖ್ಯೆ 58(300)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಬಸ್ ಸೌಕರ್ಯಕಲ್ಪಿಸುವುದು

59(290); ಶ್ರೀ ಬಣಕಾರ್ ಯು.ಬಿ.

ಅ) ಹಾವೇರಿ ಜಿಲ್ಲೆಯಲ್ಲಿ ಇದುವರೆಗೆ ಸರಕಾರಿ ಬಸ್‌ಗಳು ಸಂಚರಿಸದೇ ಇರುವ ಗ್ರಾಮಗಳು ಯಾವುವು?

ಆ) ಆ ಗ್ರಾಮಗಳಿಗೆ ಯಾವಾಗ ಬಸ್ ಸೌಕರ್ಯ ಕಲ್ಪಿಸಲಾಗುವುದು?